ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ: 080–22342162 ಇ–ಮೇಲ್: nregs-ka@nic.in

ಸಂಖ್ಯೆ: ಗ್ರಾಅಪ 271 ಉಖಾಯೋ 2015 ದಿನಾಂಕ: 30.06.2015

ರವರಿಗೆ
ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು
ಬೆಂಗಳೂರು

ಮಾನ್ಯರೆ,

**ವಿಷಯ:** 2015–16ನೇ ಸಾಲಿನ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ರೇಷ್ಮೆ ಇಲಾಖೆಗೆ ಸಂಬಂಧಿಸಿದ ಕಾಮಗಾರಿಗಳ ಮಾದರಿ ಅಂದಾಜು ಪಟ್ಟಿಗಳಿಗೆ ಅನುಮೋದನೆ ನೀಡುವ ಕುರಿತು

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 186 ಉಖಾಯೋ 2012 ಬೆಂಗಳೂರು ದಿನಾಂಕ: 23.10.2013
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 186 ಉಖಾಯೋ 2012 ಬೆಂಗಳೂರು ದಿನಾಂಕ: 02.09.2014
3. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬೆಂಗಳೂರು ರವರ ಪತ್ರ ಸಂಖ್ಯೆ: ರೇಬಿ ರೇಕ್ಷೇ ನರೇಗಾ ಕ್ರಿಯಾ ಯೋಜನೆ 03 2015 ದಿನಾಂಕ: 20.06.2015

* * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಆದೇಶದ ಪ್ರಕಾರ ತಮ್ಮ ಇಲಾಖೆಯನ್ನು ಅನುಷ್ಠಾನ ಇಲಾಖೆಯನ್ನಾಗಿ ನೇಮಕ ಮಾಡಲಾಗಿದೆ ಹಾಗೂ ಉಲ್ಲೇಖ (2) ರಂತೆ ತಮ್ಮ ಇಲಾಖೆಯ ತಾಲ್ಲೂಕು ಅಧಿಕಾರಿಗಳಿಗೆ ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿಯನ್ನಾಗಿ ಘೋಷಿಸಲಾಗಿರುತ್ತದೆ. ಉಲ್ಲೇಖ (3) ರ ಪತ್ರದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೇಷ್ಮೆ ಇಲಾಖೆಗೆ ಸಂಬಂಧಿಸಿದ ಕಾಮಗಾರಿಗಳಾದ 1) ಹಿಪ್ಪುನೇರಳೆ ನರ್ಸರಿ ಅಭಿವೃದ್ಧಿ 2) ಹೊಸ ಹಿಪ್ಪುನೇರಳೆ ತೋಟ ಅಭಿವೃದ್ಧಿ 3) ಹಿಪ್ಪುನೇರಳೆ ತೋಟ ನಿರ್ವಹಣೆ ಹಾಗೂ 4) ಕಾಂಪೋಸ್ಟ್/ಇಂಗು ಗುಂಡಿಗಳ ನಿರ್ಮಾಣ ಘಟಕಗಳ ಪರಿಷ್ಕೃತ ಮಾದರಿ ಅಂದಾಜು ಪಟ್ಟಿಗಳನ್ನು ಸಿದ್ದಪಡಿಸಿ, ಅನುಮೋದನೆಗಾಗಿ ಸಲ್ಲಿಸಿರುತ್ತೀರಿ.

2015–16ನೇ ಸಾಲಿನ ಮಾದರಿ ಅಂದಾಜು ಪಟ್ಟಿಗಳನ್ನು ಪರಿಶೀಲಿಸಿ, ಅನುಮೋದನೆ ನೀಡಿ ಈ ಪತ್ರದೊಂದಿಗೆ ಅನುಬಂಧ–1 (ಪುಟ ಸಂಖ್ಯೆ: 1 ರಿಂದ 10 ರವರೆಗೆ) ಲಗತ್ತಿಸಿದೆ. ಈ ಕಾಮಗಾರಿಗಳನ್ನು ತಾವು ಮಹಾತ್ಮ ಗಾಂಧಿ ನರೇಗಾದ ನಿಯಮಾನುಸಾರ ಅನುಷ್ಠಾನಗೊಳಿಸುವುದು. ವೈಯಕ್ತಿಕ ಫಲಾನುಭವಿಗಳ ಆಯ್ಕೆ ಮತ್ತು ಕಾಮಗಾರಿ ಅನುಷ್ಠಾನದ ವಿಧಿ ವಿಧಾನಗಳ ಕುರಿತಂತೆ, ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಹೊರಡಿಸಿರುವ ಯೋಜನೆಯ ಕಾರ್ಯಾಚರಣೆಯ ಮಾರ್ಗಸೂಚಿಗಳು – 2013, 4ನೇ ಆವೃತ್ತಿ ಮತ್ತು ಉಲ್ಲೇಖ (1) ಮತ್ತು (2) ರ ಕರ್ನಾಟಕ ಸರ್ಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆದೇಶಗಳಲ್ಲಿ ನೀಡಲಾಗಿರುವ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಲು ಕೋರಿದೆ.

**ಷರತ್ತುಗಳು:**

1. ವ್ಯಕ್ತಿಗತ ಕಾಮಗಾರಿ ಕುರಿತಂತೆ ಈ ಯೋಜನೆಯ ಕುರಿತು ಕೇಂದ್ರ ಸರ್ಕಾರ ನೀಡಿದ ಅನುಸೂಚಿ–1ರ ಕಂಡಿಕೆ 5ರಲ್ಲಿನ ಅರ್ಹ ಫಲಾನುಭವಿ ಅವರಿಗೆ ಮಾತ್ರ ಮಂಜೂರು ಮಾಡಬಹುದು. ಪ್ರಥಮ ಆದ್ಯತೆ ಪರಿಶಿಷ್ಟ ಜಾತಿ/ಪಂಗಡ ರವರಿಗೆ ನೀಡಬಹುದು, ನಂತರ ಉಳಿದ ಫಲಾನುಭವಿಗಳಿಗೆ ಆದ್ಯತೆ ನೀಡಬಹುದು.
2. ವ್ಯಕ್ತಿಗತ ಫಲಾನುಭವಿ ಕಾಮಗಾರಿಗಳಲ್ಲಿ ಸಂಬಂಧಪಟ್ಟ ಫಲಾನುಭವಿ ಅವರ ಜಮೀನಿನಲ್ಲಿ ಅನುಷ್ಠಾನಗೊಳ್ಳುವ ಕಾಮಗಾರಿಗಳಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಬೇಕು. ಇದಕ್ಕಾಗಿ ಅವರ ಅರ್ಜಿಯನ್ನು ಕೂಲಿ ಬೇಡಿಕೆಯನ್ನಾಗಿಪರಿಗಣಿಸುವುದು.
3. ಇಲಾಖಾ ಲಾಗಿನ್‌ನಿಂದ ಅನುಷ್ಠಾನ ಮಾಡಿದ ಕಾಮಗಾರಿಗಳಿಗೆ, ಜಿಲ್ಲಾ ಮಟ್ಟದಲ್ಲಿ ಕೂಲಿ ಹಾಗೂ ಸಾಮಗ್ರಿ ಅನುಪಾತವನ್ನು ಶೇಕಡ 60:40 ಕ್ಕೆ ಕಾಪಾಡಿಕೊಳ್ಳಬೇಕಾಗುತ್ತದೆ.
4. ಪ್ರತಿಯೊಂದು ಕಾಮಗಾರಿಗಳ ಅನುಷ್ಠಾನದ ಮೂರು ಹಂತಗಳ ಛಾಯಾ ಚಿತ್ರಗಳನ್ನು, ದಿನಾಂಕ ಹಾಗೂ ಲ್ಯಾಟ್‌ಲಾಂಗ್ (GPS reading) ನೊಂದಿಗೆ ನಿರ್ವಹಿಸಬೇಕು ಮತ್ತು ನರೇಗಾ soft ತಂತ್ರಾಂಶದಲ್ಲಿ ಆರೋಹಿಸುವುದು ಹಾಗೂ ಕಾಮಗಾರಿ ಸ್ಥಳದಲ್ಲಿ ಕಡ್ಡಾಯವಾಗಿ ನಾಮಫಲಕ ಅಳವಡಿಸುವುದು. ನಾಮಫಲಕ ವೆಚ್ಚ ಶೇಕಡ 40 ರಷ್ಟು ಸಾಮಗ್ರಿ ವೆಚ್ಚದಲ್ಲಿ ಅಳವಡಿಸುವುದು.
5. 2014–15ನೇ ಸಾಲಿನಲ್ಲಿ ಅನುಮೋದನೆ ಆಗಿರುವ ಕಾಮಗಾರಿಗಳನ್ನು ಈ ಪರಿಷ್ಕೃತ ಮಾದರಿ ಅಂದಾಜು ಪತ್ರಿಕೆ ಅನ್ವಯ ಅನುಷ್ಠಾನ ಮಾಡಲು ಕೋರಲಾಗಿದೆ. 2015–16 ನೇ ಸಾಲಿನ ಕೂಲಿ ಆಯವ್ಯಯಗಾಗಿ ಮಂಜೂರಾದ ಕಾಮಗಾರಿಗಳ ಹಾಗೂ

ಫಲಾನುಭವಿಗಳ ಪಟ್ಟಿ ಪಡೆದು, ಫಲಾನುಭವಿಗಳ ಅರ್ಹತೆ ಹಾಗೂ ಕಾಮಗಾರಿಗಳ ತಾಂತ್ರಿಕತೆಯನ್ನು ಪರಿಶೀಲಿಸಿ, ತಮ್ಮ ಇಲಾಖೆಯ ಲಾಗಿನ್‌ನಿಂದ ಅಥವಾ ಗ್ರಾಮ ಪಂಚಾಯಿತಿ ಲಾಗಿನ್‌ನಿಂದ ಅನುಷ್ಠಾನಗೊಳಿಸಬಹುದು.

ತಮ್ಮ ಇಲಾಖೆಯಿಂದ ಆಯ್ಕೆಯಾದ ಹೊಸ ಕಾಮಗಾರಿಗಳನ್ನು end2end ನರೇಗಾ soft ನಲ್ಲಿ ದಾಖಲಿಸಿ, ಗ್ರಾಮ ಸಭೆಯಿಂದ ಅನುಮೋದನೆ ಆದ ನಂತರ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು ಈ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಅನುಷ್ಠಾನಗೊಳಿಸುವುದು.

6. ಕಾಮಗಾರಿಗಳು ಗ್ರಾಮ ಸಭೆ ಅನುಮೋದನೆ ಹಾಗೂ ಕ್ರಿಯಾ ಯೋಜನೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆಯಾದ ನಂತರ ಸಂಬಂಧಪಟ್ಟ ವ್ಯಕ್ತಿಗತ ಫಲಾನುಭವಿಗಳಿಂದ ಅರ್ಜಿ ಪಡೆದು, ಅವರ ಅರ್ಹತೆ ಹಾಗೂ ಕಾಮಗಾರಿಗಳ ತಾಂತ್ರಿಕತೆಯನ್ನು ಪರಿಶೀಲಿಸಿ, ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು.

7. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ಥಾಪಿತವಾಗಿರುವ ಹಿಪ್ಪುನೇರಳೆ ತೋಟಕ್ಕೆ 2 ಹಾಗೂ 3ನೇ ವರ್ಷ ತೋಟ ನಿರ್ವಹಣೆ ಕೈಗೊಳ್ಳಲಾಗಿದೆಯೇ ಎಂಬುದರ ಬಗ್ಗೆ ಅನುಷ್ಠಾನ ಅಧಿಕಾರಿಗಳು ಖಚಿತಪಡಿಸಿಕೊಳ್ಳುವುದು.

8. ಅನುಷ್ಠಾನ ಅಧಿಕಾರಿಗಳು ಒಬ್ಬ ಫಲಾನುಭವಿಗೆ ಒಂದು ಎಕರೆಗಿಂತ ಹೆಚ್ಚು ಸಹಾಯಧನ ಸೌಲಭ್ಯಕ್ಕೆ ಅವಕಾಶ ಕೊಡುವ ಮೊದಲು ಬೇರೆ ಯಾವ ಅರ್ಹ ಫಲಾನುಭವಿಯು ಈ ಸೌಲಭ್ಯದಿಂದ ವಂಚಿತರಾಗಿರುವುದಿಲ್ಲವೆಂದು ಖಚಿತಪಡಿಸಿಕೊಳ್ಳುವುದು. ಒಬ್ಬ ಫಲಾನುಭವಿಗೆ ಹೆಚ್ಚ ಸಹಾಯಧನ ಕೊಡುವ ಬದಲಾಗಿ, ಹೆಚ್ಚಿನ ಸಂಖ್ಯೆಯ ಫಲಾನುಭವಿಗಳಿಗೆ ಈ ಸೌಲಭ್ಯ ಕಲ್ಪಿಸಿಕೊಡಲು ಅನುವು ಮಾಡಿಕೊಡುವುದು ಸೂಕ್ತ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಆದ್ಯತೆ ನೀಡುವುದು.

9. ತಮ್ಮ ಇಲಾಖೆಯ ತಾಲ್ಲೂಕು ಅಧಿಕಾರಿಗಳ ಲಾಗಿನ್‌ನಿಂದ ಕೂಲಿ ಬೇಡಿಕೆ ಪಡೆಯುವುದು, ಕಾಮಗಾರಿಗಳ ಹಂಚಿಕೆ ಮಾಡುವುದು ಹಾಗೂ ಎನ್.ಎಂ.ಆರ್ ಸೃಜಿಸಲು ನರೇಗಾ ಸಾಫ್ಟ್‌ನಲ್ಲಿ ಈಗಾಗಲೇ ಅವಕಾಶ ನೀಡಿರುವುದರಿಂದ, ಕೂಲಿ ಕಾರ್ಮಿಕರನ್ನು ಸಂಘಟಿಸಿ, ಅವರಿಂದ ಕೂಲಿ ಬೇಡಿಕೆಯನ್ನು ಪಡೆದು, ತಮ್ಮ ಇಲಾಖಾ ಲಾಗಿನ್‌ನಿಂದ ಎನ್.ಎಂ.ಆರ್ ಗಳನ್ನು ಸೃಜಿಸಿ, ಕಾಮಗಾರಿಗಳನ್ನು ನಿರ್ವಹಿಸಲು ಇಲಾಖಾ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

10. ಕಾಮಗಾರಿಗಳ ಚಾಲನೆ ಅಧಿಕಾರ ಹಾಗೂ ಅಂದಾಜು ಪತ್ರಿಕೆಗಳ ಫ್ರೀಜಿಂಗ್ ಜಿಲ್ಲಾ ಮಟ್ಟದ ಅಧಿಕಾರಿಗಳ ಲಾಗಿನ್‌ನಲ್ಲಿ ಈಗಾಗಲೇ ನೀಡಲಾಗಿದೆ. ಈ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳಕೂಲಿ ಹಾಗೂ ಸಾಮಗ್ರಿ ಬಿಲ್ಲುಗಳ ಸೃಜನೆ ಹಾಗೂ ಹಣ ಪಾವತಿ ಇ.ಎಫ್.ಎಂ.ಎಸ್ (e-FMS) ಮೂಲಕ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ. ನಿಗಧಿಪಡಿಸಿದ ಅಧಿಕಾರಿಗಳಿಗೆ DSC ಡೋಂಗಲ್ ಬೇಕಾಗಿದಲ್ಲಿ ಅರ್ಜಿಸಲ್ಲಿಸಿದಲ್ಲಿ ನೀಡಲಾಗುವುದು.

11. ಪ್ರತಿ ಕಾಮಗಾರಿಯ ಮಾದರಿ ಅಂದಾಜು ಪತ್ರಿಕೆಯನ್ನು ನರೇಗಾ ತಂತ್ರಾಂಶದಲ್ಲಿ ಅಂತಿಮಗೊಳಿಸುವಾಗ (freezing), ಕಾಮಗಾರಿ ಅನುಷ್ಠಾನದ ಫಲಶೃತಿಯ (outcome) ವಿವರಗಳನ್ನು ನಮೂದಿಸುವುದು ಕಡ್ಡಾಯವಾಗಿರುತ್ತದೆ. ಇದರ ಬಗ್ಗೆ ಪ್ರತಿ ಕಾಮಗಾರಿಗಳ ಫಲಶೃತಿಯನ್ನು ತಮ್ಮ ಹಂತದಲ್ಲಿಯೇ ನಿರ್ಧರಿಸಿ, ಇಲಾಖಾ ಅಧಿಕಾರಿಗಳಿಗೆ ನಮೂದಿಸಲು ಸೂಚನೆ ನೀಡುವುದು.

12. ಪ್ರತಿ ಕಾಮಗಾರಿಗೆ ಪ್ರತ್ಯೇಕ ಕಡತವನ್ನು ನಿರ್ವಹಿಸಬೇಕಾಗುತ್ತದೆ, ಅದರಂತೆ ಎಲ್ಲಾ ದಾಖಲಾತಿಗಳನ್ನು ಕ್ರಮಬದ್ಧವಾಗಿ ನಿರ್ವಹಿಸುವುದು ಮತ್ತು ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡ ನಂತರ ಹಾಘೂ ಹಣ ಪಾವತಿಯಾದ ನಂತರ ಸಮಾಪನಾ ವರದಿ ಪಡೆದು ನರೇಗಾ ತಂತ್ರಾಂಶದಲ್ಲಿ ದಾಖಲಿಸುವುದು.

ಈ ಮಾದರಿ ಅಂದಾಜು ಪತ್ರಿಕೆಗಳಲ್ಲಿ ಏನಾದರೂ ಅವಶ್ಯಕ ಮಾರ್ಪಾಡು ಮಾಡಬೇಕಿದಲ್ಲಿ ತಮ್ಮ ಹಂತದಲ್ಲಿ ಶೇಕಡ 10 ಮೊತ್ತದಲ್ಲಿ ಮಾತ್ರ ಬದಲಾವಣೆ ಮಾಡಬಹುದಾಗಿರುತ್ತದೆ. ಈ ಯೋಜನೆಯ ಇತರೆ ವಿಧಿ ವಿಧಾನಗಳನ್ನು ಅನುಸರಿಸಲು ತಮ್ಮ ಇಲಾಖೆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ವರದಿಯನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ

ಆಯುಕ್ತರು
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

8/6/15

ಪ್ರತಿಯನ್ನು

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆ
3. ಎಲ್ಲಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ
4. ವಿಶೇಷ ಆಯುಕ್ತರು (ಅರಣ್ಯ) / ಮುಖ್ಯ ಕಾರ್ಯಾಚರಣೆ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
5. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
6. ನಿರ್ದೇಶಕರು (ಗುಣ ನಿಯಂತ್ರಣ) / ಜಂಟಿ ನಿರ್ದೇಶಕರು, ತಾಂತ್ರಿಕ / ತೋಟಗಾರಿಕೆ / ಆಡಳಿತ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
7. ಸಾರ್ವಜನಿಕ ಸಂಪರ್ಕಾಧಿಕಾರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

## ರೇಷ್ಮೆ ಇಲಾಖೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ
ಖಾತರಿ ಯೋಜನೆಯೊಂದಿಗೆ ಇಲಾಖಾ ಕಾರ್ಯಕ್ರಮಗಳನ್ನು
ಒಗ್ಗೂಡಿಸಿಕೊಂಡು ತಯಾರಿಸಿದ ಮಾದರಿ ಅಂದಾಜು ಪಟ್ಟಿಗಳು
ರೇಷ್ಮೆ ನಿರ್ದೇಶನಾಲಯ
ಬೆಂಗಳೂರು

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ

**2015–16 ನರೇಗಾ ಕಾರ್ಯಕ್ರಮ**
**ಮಾದರಿ ಘಟಕ ದರ**

ಕಾಮಗಾರಿ 1: ಒಂದು ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆ ನರ್ಸರಿ ಬೆಳೆಸುವುದು

(ಮೊತ್ತ ರೂ.ಗಳಲ್ಲಿ)

| ಕ್ರಸಂ | ಐಟಂ ಸಂ. | ಚಟುವಟಿಕೆ ವಿವರ | ದರ | ಪರಿಮಾಣ | ಒಟ್ಟು ಅಂದಾಜು ಮೊತ್ತ | | | ಎಂ.ಜಿ.ಎನ್.ಆರ್.ಇ.ಜಿ.ಎ ಕೂಲಿ ವಿವರ | | | ಎಂ.ಜಿ.ಎನ್.ಆರ್.ಇ.ಜಿ.ಎ ಸಾಮಗ್ರಿ ವಿವರ | | | ಇಲಾಖೆ ಒಗ್ಗೂಡಿಸುವಿಕೆ ಮೂಲಕ ಕೂಲಿ ವಿವರ | | | ಇಲಾಖೆ ಒಗ್ಗೂಡಿಸುವಿಕೆ ಮೂಲಕ ಸಾಮಗ್ರಿ ವಿವರ | | | ಉಲ್ಲೇಖ |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | ಒಟ್ಟು ಮೊತ್ತ | ಕೂಲಿ | ಸಾಮಗ್ರಿ ವೆಚ್ಚ | ಮಾನವ ದಿನಗಳು | ಕೂಲಿ ದರ | ಮೊತ್ತ | ಪರಿಮಾಣ | ದರ | ಮೊತ್ತ | ಮಾನವ ದಿನಗಳು | ಕೂಲಿ ದರ | ಮೊತ್ತ | ಪರಿ ಮಾಣ | ದರ | ಮೊತ್ತ | |
| | | | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
| 1 | 2 | 3 | | | | | | | | | | | | | | | | | | |
| 1 | 15ಎ ನರೇಗಾ | 1 ಎಕರೆ ಪ್ರದೇಶದಲ್ಲಿ 2.4ಮಿ.ಉದ್ದ, 1.2 ಮೀ ಅಗಲ, 0.15 ಮೀ ಎತ್ತರ (0.432 ಘ.ಮೀ) ಅಳತೆಯ ಸಸಿ ಮಡಿ ತಯಾರಿಕೆ (4.32 ಘ.ಮೀಗೆ ರೂ.536.84 ನಿಗಧಿಯಾಗಿದೆ) | ಪ್ರತಿ ಸಸಿ ಮಡಿಗೆ ರೂ.53.684 (0.45ಘ.ಮೀ) | ಎಕರೆಗೆ 1092 ಸಸಿ ಮಡಿಗಳು (No. of estimate seedlings = 1.5 Lakhs) | | – | – | 287 | 204 | 58548 | – | – | – | – | – | – | – | 15 (ಎ) ನರೇಗಾ | | |
| 2 | ಇಲಾಖೆ | ಮರಳು / ಕೆಂಪು ಮಣ್ಣು | – | – | | – | – | – | – | – | ಮರಳು / ಕೆಂಪು ಮಣ್ಣು ಎರಡು ಟ್ರಕ್ ಲೋಡ್ (17.5'x 7 x2.5') | ರೂ. 7500 ಒಂದು ಲೋಡ್‌ಗೆ | 15000 | – | – | – | | ಇಲಾಖೆ | | |
| 3 | ಇಲಾಖೆ | ಕೊಟ್ಟಿಗೆ ಗೊಬ್ಬರ | – | – | – | – | – | – | – | – | ಕೊಟ್ಟಿಗೆ ಗೊಬ್ಬರ 10 ಮೆ.ಟನ್ | ರೂ. 1000 ಒಂದು ಟನ್‌ಗೆ | 10000 | – | | | – | ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ, ಮೈಸೂರು | | |

ಗ್ರಾಮೀಣಾಭಿವೃದ್ಧಿ ಆಯುಕ್ತರು
ಸಂಖ್ಯೆ: 271 EGS
ದಿನಾಂಕ 30-6-2015
ಗ್ರಾ.ಅ ಮತ್ತು ಪಂ. ರಾಜ್

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
|---|---|---|---|---|---|---|---|---|---|---|---|---|---|---|---|---|---|---|---|---|
| 4 | ಇಲಾಖೆ | ಹಿಪ್ಪುನೇರಳೆ ಕಡ್ಡಿ | – | – | – | – | – | – | – | – | 5 ಮೆ.ಟನ್ | ರೂ. 1600 ಒಂದು ಟನ್‌ಗೆ | 8000 | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ | | |
| 5 | ಇಲಾಖೆ | ಕಡ್ಡಿ ಸಾಗಾಣಿಕಾ ವೆಚ್ಚ | – | – | – | – | – | – | – | – | ಒಂದು ಲಾರಿ ಲೋಡ್ | ರೂ. 2000 ಒಂದು ಲೋಡ್ ಗೆ | 2000 | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ | | |
| 6 | ಇಲಾಖೆ | ಬಿತ್ತನೆ ಕಡ್ಡಿ ತಯಾರಿಕೆ, ಎಕರೆಗೆ 2.10 ಲಕ್ಷ ಬಿತ್ತನೆ ಕಡ್ಡಿಗಳು | ಪ್ರತಿ ಮಾನವ ದಿನಕ್ಕೆ 2500 ಬಿತ್ತನೆ ಕಡ್ಡಿ ತಯಾರಿಕೆ | 2.10 ಲಕ್ಷ ಬಿತ್ತನೆ ಕಡ್ಡಿಗಳು | – | – | – | 84 | 204 | 17136 | – | – | – | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ | | |
| 7 | ಇಲಾಖೆ | ಬಿತ್ತನೆ ಕಡ್ಡಿಗಳನ್ನು ಸಸಿ ಮಡಿಗಳಲ್ಲಿ ನಾಟಿ ಮಾಡುವುದು | ಪ್ರತಿ ಮಾನವ ದಿನಕ್ಕೆ 10 ಮಡಿಗಳಲ್ಲಿ ಬಿತ್ತನೆ ಕಡ್ಡಿ ನಾಟಿ | 1092 ಸಸಿ ಮಡಿಗಳಲ್ಲಿ ಕಡ್ಡಿ ನಾಟಿ ಮಾಡುವುದು | – | – | – | 109 | 204 | 22236 | – | – | – | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ | | |
| 8 | ಇಲಾಖೆ | ಸಸಿ ಮಡಿಗಳಿಗೆ ನೀರು ಹಾಯಿಸುವುದು | ಸಸಿ ಮಡಿಗಳಿಗೆ ನೀರು ಹಾಯಿಸುವುದು | 2 ಮಾನವ ದಿನದಂತೆ 25 ಬಾರಿ | – | – | – | 50 | 204 | 10200 | – | – | – | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ | | |
| 9 | ಇಲಾಖೆ | ಕಳೆ ತೆಗೆಯುವುದು ಔಷಧಿ ಸಿಂಪರಣೆ, ಇತರೆ ಕೆಲಸಗಳು | ಕಳೆ ತೆಗೆಯುವುದು ಔಷಧಿ ಸಿಂಪರಣೆ, ಇತರೆ ಕೆಲಸಗಳು | 27 ಮಾನವ ದಿನಗಳಂತೆ ಎರಡು ಬಾರಿ | – | – | – | 55 | 204 | 11220 | – | – | – | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ | | |
| 10 | ಇಲಾಖೆ | ಮಡಿಗಳಿಂದ ಸಸಿಗಳನ್ನು ಕೀಳುವುದು | ಪ್ರತಿ ಮಾನವ ದಿನಕ್ಕೆ 10 ಸಸಿ ಮಡಿಗಳು | 107 ಮಾನವ ದಿನಗಳು | – | – | – | 109 | 204 | 22236 | – | – | – | | | | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ | | |

ಸಂಖ್ಯೆ: KGS 271
ದಿನಾಂಕ 30/06/2015

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
|---|---|---|---|---|---|---|---|---|---|---|---|---|---|---|---|---|---|---|---|---|
| 11 | | ಯಂತ್ರೋಪಕರಣ ಸಾಧನಗಳು | | | | | | | | | ಒಟ್ಟಾರೆ | – | 1689 | | | | | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ | | |
| ಒಟ್ಟು | | | | | 178265 | 141576 | 36689 | 694 | 204 | 141576 | – | – | 36689 | | – | – | – | – | – | – |
| 12 | ನರೇಗಾ | ಸಲಕರಣೆಗಳ ಮೊನಚುಗೊಳಿಸುವಿಕೆ ವೆಚ್ಚ | ಪ್ರತಿ ದಿನಕ್ಕೆ ರೂ.10 | | | | 6940 | | | | | | | | | | | | | |
| | | ಒಟ್ಟು | | | 185205 | 141576 | 43629 | | | | | | | | | | | | | |
| 13 | ನರೇಗಾ | ತಾಂತ್ರಿಕ ಸಲಹಾ ಸೇವಾ ಅಂದಾಜು ವೆಚ್ಚ | ಒಟ್ಟು ವೆಚ್ಚದ ಶೇ 1 ರಷ್ಟು | | | | 1852 | | | | | | | | | | | | | |
| | | ಒಟ್ಟು | | | 187057 | 141576 | 45481 | | | | | | | | | | | | | |
| 14 | ನರೇಗಾ | ನಾಮಫಲಕ ಮತ್ತು ದಾಖಲೀಕರಣ/ಫೋಟೋ ಅಳವಡಿಕೆಗಳು | | | | | 500 | | | | | | | | | | | | | |
| | | ಒಟ್ಟು | | | 187557 | 141576 | 45981 | | | | | | | | | | | | | |
| | ಕೂಲಿ:ಸಾಮಗ್ರಿ ಅನುಪಾತ | | | | | ಶೇ. 75 | ಶೇ 25 | | | | | | | | | | | | | |

1. ಯಾವುದೇ ರೈತ ಒಂದು ಎಕರೆ ಹಿಪ್ಪು ನೇರಳೆ ಪ್ರದೇಶದಲ್ಲಿ ಕಡ್ಡಿ ನಾಟಿ ಮಾಡಿದಲ್ಲಿ 1.50 ಲಕ್ಷ ಸಸಿಗಳನ್ನು ಪಡೆಯಬಹುದು.

2. ಸಸಿ ಒಂದಕ್ಕೆ ರೂ.1.50 ರಂತೆ 1.50 ಲಕ್ಷ ಸಸಿಗೆ ರೂ.2.25 ಲಕ್ಷ ಹಣ ದೊರೆಯುತ್ತದೆ.

ಸಂಖ್ಯೆ: EGS : 271
ದಿನಾಂಕ: 30/06/2015

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

No. of plants : 5445

ಕಾಮಗಾರಿ 2 : ಒಂದು ಎಕರೆ ಪ್ರದೇಶದಲ್ಲಿ ಹೊಸ ಹಿಪ್ಪುನೇರಳೆ ತೋಟ ಬೆಳೆಸುವುದು (ಜೋಡಿ ಸಾಲು ಪದ್ಧತಿ (3' X2')+5')

(ಮೊತ್ತ ರೂ.ಗಳಲ್ಲಿ)

| ಕ್ರಮ ಸಂ | ಐಟಂ ಸಂ. | ಚಟುವಟಿಕೆ | ದರ | ಪರಿಮಾಣ | ಒಟ್ಟು ಅಂದಾಜು ಮೊತ್ತ | | | ಎಂ.ಜಿ.ಎನ್.ಆರ್.ಇ.ಜಿ.ಎ | | | | | | ಇಲಾಖೆ ಒಗ್ಗೂಡಿಸುವಿಕೆ ಮೂಲಕ | | | | | | ಉಲ್ಲೇಖ |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | ಕೂಲಿ ವಿವರ | | | ಸಾಮಗ್ರಿ ವಿವರ | | | ಕೂಲಿ ವಿವರ | | | ಸಾಮಗ್ರಿ ವಿವರ | | | |
| | | | | | ಒಟ್ಟು ಮೊತ್ತ | ಕೂಲಿ | ಸಾಮಗ್ರಿ ವೆಚ್ಚ | ಮಾನವ ದಿನಗಳು | ಕೂಲಿ ದರ | ಮೊತ್ತ | ಪರಿಮಾಣ | ದರ | ಮೊತ್ತ | ಮಾನವ ದಿನಗಳು | ಕೂಲಿ ದರ | ಮೊತ್ತ | ಪರಿಮಾಣ | ದರ | ಮೊತ್ತ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
| 1 | ಇಲಾಖೆ | ಮಣ್ಣಿನ ಪರೀಕ್ಷೆ | | | | | | | | | | | 200 | | | | | | | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |
| 2 | ಇಲಾಖೆ | ಭೂಮಿ ತಯಾರಿಕೆ | ಒಂದು ಮಾನವ ದಿನಕ್ಕೆ 250 ಚ.ಮೀ | 4000 ಚ.ಮಿ | – | – | – | 16 | 204 | 3264 | – | – | – | – | – | – | 5445 ಸಸಿಗಳು | ಸಸಿಗೆ ರೂ.1.50 | 8168 | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |
| 3 | ಇಲಾಖೆ | ಕೊಟ್ಟಿಗೆ ಗೊಬ್ಬರ ಖರೀದಿ | – | – | – | – | – | – | – | – | 10 ಮೆ.ಟನ್. | 1000 ರೂ ಒಂದು ಟನ್ ಗೆ | 10000 | – | – | – | ಹನಿ ನೀರಾವರಿಗೆ ಸಹಾಯ ಧನ ಎಕರೆಗೆ | – | 35135 | ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ, ಮೈಸೂರು |
| 4 | ಇಲಾಖೆ | ಬೇವಿನ ಹಿಂಡಿ ಖರೀದಿ | | | | | | | | | 400 ಕೆ.ಜಿ. | ರೂ.15 ಕೆ.ಜಿ.ಗೆ | 6000 | | | | | | | ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ, ಮೈಸೂರು |
| 5 | ಇಲಾಖೆ | ರಸ ಗೊಬ್ಬರ ಖರೀದಿ (ವರ್ಷಕ್ಕೆ 2 ಬಾರಿ) | | | | | | | | | 280kg-As<br>140kg-SSP<br>30kg-MOP | 15/-kg<br>9/-kg<br>18/-kg | 4200<br>1260<br>540 | | | | | | | ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ, ಮೈಸೂರು |
| 6 | ಇಲಾಖೆ | ಕೊಟ್ಟಿಗೆ ಗೊಬ್ಬರ ಮತ್ತು ಬೇವಿನ ಹಿಂಡಿ ಹಾಕುವುದು (ವರ್ಷಕ್ಕೆ 2 ಬಾರಿ) | 1 ಮಾನವ ದಿನಕ್ಕೆ 1250 ಕೆ.ಜಿ | 10000ಕೆ.ಜಿ | – | – | – | 8 | 204 | 1632 | – | – | – | – | – | – | | – | – | ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ, ಮೈಸೂರು |

ಆಯುಕ್ತರ ಕಚೇರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಸಂಖ್ಯೆ: EGS 271
ದಿನಾಂಕ 30/06/2015

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
|---|---|---|---|---|---|---|---|---|---|---|---|---|---|---|---|---|---|---|---|---|
| 7 | ಇಲಾಖೆ | ಬದು ಹಾಗೂ ಕಾಲುವೆ ತೆಗೆಯುವುದು | 1 ಮಾನವ ದಿನಕ್ಕೆ 200 ಚ.ಮೀ | 4000 ಚ.ಮೀ | – | – | – | 20 | 204 | 4080 | – | – | – | – | – | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |
| 8 | ಇಲಾಖೆ | ಸಸಿಗಳನ್ನು ನೆಡುವುದು | 1 ಮಾನವ ದಿನಕ್ಕೆ 272 ಸಸಿ ನೆಡುವುದು | 5445 ಸಸಿಗಳು | – | – | – | 20 | 204 | 4080 | – | – | – | – | – | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |
| 9 | ಇಲಾಖೆ | ಅಗೆಯುವುದು ಹಾಗೂ ಕಳೆ ತೆಗೆಯುವುದು (ವರ್ಷಕ್ಕೆ 4 ಬಾರಿ) | ಒಂದು ಮಾನವ ದಿನಕ್ಕೆ 400ಚ.ಮಿ | 4000 ಚ.ಮಿ | – | – | – | 40 | 204 | 8160 | – | – | – | – | – | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |
| 10 | ಇಲಾಖೆ | ಅಂತರ ಬೇಸಾಯ (ವರ್ಷಕ್ಕೆ 2 ಬಾರಿ) | ಒಂದು ಮಾನವ ದಿನಕ್ಕೆ 500ಚ.ಮಿ | 4000 ಚ.ಮಿ | | | | 16 | 204 | 3264 | | | | | | | | | | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |
| 11 | ಇಲಾಖೆ | ನೀರು ಹಾಯಿಸುವುದು (ವರ್ಷಕ್ಕೆ 40 ಸಾರಿ) (ಹನಿ ನೀರಾವರಿ ಇಲ್ಲದಿರುವ ಕಡೆ) | ಒಂದು ಮಾನವ ದಿನಕ್ಕೆ 4000ಚ.ಮಿ | 4000 ಚ.ಮಿ | | | | 40 | 204 | 8160 | – | – | – | – | – | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |
| 12 | ಇಲಾಖೆ | ರಸ ಗೊಬ್ಬರ ಹಾಕುವುದು ( ವರ್ಷಕ್ಕೆ 2 ಬಾರಿ) | ಒಂದು ಮಾನವ ದಿನಕ್ಕೆ 500ಚ.ಮಿ | 4000 ಚ.ಮೀ | | | | 16 | 204 | 3264 | – | – | – | – | – | – | – | – | – | ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ,ಮೈಸೂರು |
| 13 | ಇಲಾಖೆ | ಜೈವಿಕ ಗೊಬ್ಬರ ಖರೀದಿ ( ವರ್ಷಕ್ಕೆ 2 ಬಾರಿ) | | | | | | | | | ಸಂಪ್ರಕೃತಿ-8ಕೆ.ಜಿ<br>ಸರಿ ಫಾಸ್ಟ್-10ಕೆ.ಜಿ<br>ವ್ಯಾಮ-01 | ರೂ. 57/ ಕೆ.ಜಿ.<br>ರೂ. 57/ ಕೆ.ಜಿ.<br>ರೂ. 67/ ಕೆ.ಜಿ | 2186 | | | | | | | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |

ಸಂಖ್ಯೆ: EGS-271
ದಿನಾಂಕ 30/06/2015

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
|---|---|---|---|---|---|---|---|---|---|---|---|---|---|---|---|---|---|---|---|---|
| 14 | ಇಲಾಖೆ | ಸೊಪ್ಪು ಬಿಡಿಸುವುದು (ಮೊದಲನೇ ವರ್ಷ 3 ಬಾರಿ ) | | 45 ಮಾನವ ದಿನಗಳು | – | – | – | 45 | 204 | 9180 | | | | | | | | | | ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ,ಮೈಸೂರು |
| 14 | ಇಲಾಖೆ | ಯಂತ್ರೋಪಕರಣ ಸಾಧನಗಳ ವೆಚ್ಚ | | | | | | | | | ಒಟ್ಟಾರೆ | | 1400 | | | | | | | |
| | ಒಟ್ಟು | | | | 70870 | 45084 | 25786 | 221 | 204 | 45084 | | | 25786 | | | | | | 43303 | |
| | ಕೂಲಿ:ಸಾಮಗ್ರಿ ಅನುಪಾತ | | | | | ಶೇ 64 | ಶೇ 36 | | | | | | | | | | | | | |
| | | | | | 114173 | 45084 | 69089 | | | | | | | | | | | | | |
| 15 | ನರೇಗಾ | ಸಲಕರಣೆಗಳ ಮೊನಚುಗೊಳಿಸುವಿಕೆ ವೆಚ್ಚ | ಪ್ರತಿ ದಿನಕ್ಕೆ ರೂ.10 | | | | 2210 | | | | | | | | | | | | | |
| | | ಒಟ್ಟು | | | 116383 | 45084 | 71299 | | | | | | | | | | | | | |
| 16 | ನರೇಗಾ | ತಾಂತ್ರಿಕ ಸಲಹಾ ಸೇವಾ ಅಂದಾಜು ವೆಚ್ಚ ಒಟ್ಟು ವೆಚ್ಚ ಶೇ 1 ರಷ್ಟು | | | | | 1164 | | | | | | | | | | | | | |
| | | ಒಟ್ಟು | | | 117547 | 45084 | 72463 | | | | | | | | | | | | | |
| 17 | ನರೇಗಾ | ನಾಮಫಲಕ ಮತ್ತು ದಾಖಲೀಕರಣ ಅಳವಡಿಕೆಗಳು | | | | | 500 | | | | | | | | | | | | | |
| | | ಒಟ್ಟು | | | 118047 | 45084 | 72963 | | | | | | 25786 | | | | | | 43303 | |

ಸಂಖ್ಯೆ: EGS: 271
ದಿನಾಂಕ 30/06/2016.

1. ಇಲಾಖಾ ಕಾರ್ಯಕ್ರಮ ಸಿಡಿಪಿ ಯೋಜನೆಯಡಿ ಎಕರೆಗೆ ಒಟ್ಟು ರೂ. 10500 ಪ್ರೋತ್ಸಾಹಧನ ನೀಡಲಾಗುವುದು. ಇದರಡಿ ಸಸಿಗಳ ವೆಚ್ಚ ರೂ. 8168 ನ್ನು ಭರಿಸಬಹುದಾಗಿದೆ.

2. ಹನಿ ನೀರಾವರಿಗೆ ರೂ. 35135 ಗಳ ಸಹಾಯಧನವನ್ನು ನೀಡಲಾಗುವುದು.

3. ಒಗ್ಗೂಡಿಸುವಿಕೆಯಿಂದ ಒಬ್ಬ ರೈತನಿಗೆ ಎಕರೆಗೆ ಒಟ್ಟು 43303 ರೂಗಳು ಇಲಾಖಾವತಿಯಿಂದ ಮತ್ತು ನರೇಗಾ ವತಿಯಿಂದ ರೂ.70870 ಗಳ (ಕೂಲಿ ವೆಚ್ಚ ಮತ್ತು ಸಾಮಗ್ರಿ ವೆಚ್ಚ ) ಸೇರಿ ಒಟ್ಟು 118047/- ರೂಗಳ ಸಹಾಯಧನವನ್ನು ನೀಡಲಾಗುವುದು.

29/5

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

ಕಾಮಗಾರಿ 3 : ಒಂದು ಎಕರೆ ಹೊಸ ಹಿಪ್ಪುನೇರಳೆ ತೋಟವನ್ನು 2 ಹಾಗೂ 3ನೇ ವರ್ಷ ನಿರ್ವಹಣೆ ಮಾಡುವುದು (ಜೋಡಿ ಸಾಲು ಪದ್ಧತಿ 3' X2')+5') ಗದೆಗ್ ಸಂ: 5445

(ಮೊತ್ತ ರೂ.ಗಳಲ್ಲಿ)

| ಕ್ರಮ ಸಂ | ಮೂಲ | ಚಟುವಟಿಕೆ | ದರ | ಪರಿಮಾಣ | ಒಟ್ಟು ಅಂದಾಜು ಮೊತ್ತ | | | ಎಂ.ಜಿ.ಎನ್.ಆರ್.ಇ.ಜಿ.ಎ | | | | | | ಇಲಾಖೆ ಒಗ್ಗೂಡಿಸುವಿಕೆ ಮೂಲಕ | | | | | | ಉಲ್ಲೇಖ |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | ಕೂಲಿ ವಿವರ | | | ಸಾಮಗ್ರಿ ವಿವರ | | | ಕೂಲಿ ವಿವರ | | | ಸಾಮಗ್ರಿ ವಿವರ | | | |
| | | | | | ಒಟ್ಟು ಮೊತ್ತ | ಕೂಲಿ | ಸಾಮಗ್ರಿ ವೆಚ್ಚ | ಮಾನವ ದಿನಗಳು | ಕೂಲಿ ದರ | ಮೊತ್ತ | ಪರಿಮಾಣ | ದರ | ಮೊತ್ತ | ಮಾನವ ದಿನಗಳು | ಕೂಲಿ ದರ | ಮೊತ್ತ | ಪರಿಮಾಣ | ದರ | ಮೊತ್ತ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
| 1 | ಇಲಾಖೆ | ಕೊಟ್ಟಿಗೆ ಗೊಬ್ಬರ ಖರೀದಿ | – | – | – | – | – | – | – | – | 10 ಮೆ.ಟನ್. | 1000/ ಟನ್ | 10000 | – | – | – | – | – | – | ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಮೈಸೂರು |
| 2 | ಇಲಾಖೆ | ಬೇವಿನ ಹಿಂಡಿ ಖರೀದಿ | | | | | | | | | 400 ಕೆ.ಜಿ. | ಕೆ.ಜಿ.ಗೆ 15/– | 6000 | | | | | | | ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಮೈಸೂರು |
| 3 | ಇಲಾಖೆ | ಕೊಟ್ಟಿಗೆ ಗೊಬ್ಬರ ಬೇವಿನ ಹಿಂಡಿ ಹಾಕಲು (ವರ್ಷಕ್ಕೆ ಎರಡು ಬಾರಿ) | ಒಂದು ಮಾನವ ದಿನಕ್ಕೆ 1250 ಕೆ.ಜಿ | 10000 ಕೆ.ಜಿ | – | – | – | 8 | 204 | 1632 | – | – | – | – | – | – | – | – | – | ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಮೈಸೂರು |
| 4 | ಇಲಾಖೆ | ಬೆಳೆ ಬಿಟ್ಟು ಬೆಳೆಗೆ ಉಳುಮೆ ಮಾಡುವುದು (ವರ್ಷಕ್ಕೆ 5 ಬೆಳೆಗಳು) | ಒಂದು ಮಾನವ ದಿನಕ್ಕೆ 666 ಚ.ಮೀ | 4000 ಚ.ಮೀ | – | – | – | 12 | 204 | 2448 | – | – | – | – | – | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |
| 5 | ಇಲಾಖೆ | ಬೆಳೆ ಬಿಟ್ಟು ಬೆಳೆಗೆ ಬದು ಹಾಗೂ ಕಾಲುವೆ ನಿರ್ಮಾಣ (ವರ್ಷಕ್ಕೆ 5 ಬೆಳೆಗಳು/ 2 ಬಾರಿ) | ಒಂದು ಮಾನವ ದಿನಕ್ಕೆ 200 ಚ.ಮೀ | 4000 ಚ.ಮೀ | – | – | – | 40 | 204 | 8160 | – | – | – | – | – | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |

ಸಂಖ್ಯೆ: EGS-271
ದಿನಾಂಕ: 30/06/2015

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
|---|---|---|---|---|---|---|---|---|---|---|---|---|---|---|---|---|---|---|---|---|
| 6 | ಇಲಾಖೆ | ಬೆಳೆ ಬಿಟ್ಟು ಬೆಳೆಗೆ ಮಣ್ಣನ್ನು ಸಡಿಲ ಮಾಡಿ ಕಳೆ ತೆಗೆಯುವುದು (ವರ್ಷಕ್ಕೆ 5 ಬೆಳೆಗಳು / 2 ಬಾರಿ) | ಒಂದು ಮಾನವ ದಿನಕ್ಕೆ 400 ಚ.ಮೀ | 4000 ಚ.ಮೀ | – | – | – | 20 | 204 | 4080 | – | – | – | – | – | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |
| 7 | ಇಲಾಖೆ | ರಸ ಗೊಬ್ಬರ ಖರೀದಿ | | | | | | | | | 700kg-AS<br>350-SSP<br>90kg-MOP | 15/-kg<br>9/-kg<br>18/-kg | 10500<br>3150<br>1620 | | | | | | | ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಮೈಸೂರು |
| 8 | ಇಲಾಖೆ | ರಸ ಗೊಬ್ಬರ ಹಾಕುವುದು (ವರ್ಷಕ್ಕೆ 5 ಬೆಳೆಗಳು /2 ಬಾರಿ) | ಒಂದು ಮಾನವ ದಿನಕ್ಕೆ 500 ಚ.ಮೀ | 4000 ಚ.ಮೀ | – | – | – | 16 | 204 | 3264 | – | – | – | – | – | – | – | – | – | ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಮೈಸೂರು |
| 9 | ಇಲಾಖೆ | ನೀರು ಹಾಯಿಸುವುದು (ವರ್ಷಕ್ಕೆ 40 ಸಾರಿ) (ಹನಿ ನೀರಾವರಿ ಇಲ್ಲದಿರುವ ಕಡೆ) | ಒಂದು ಮಾನವ ದಿನಕ್ಕೆ 4000ಚ.ಮಿ | 4000 ಚ.ಮೀಗೆ | | | | 40 | 204 | 8160 | – | – | – | – | – | – | – | – | – | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |
| 10 | 2ಬಿ ನರೇಗಾ | ಹಿಪ್ಪು ನೇರಳೆ ತೋಟದ ಸಾಲುಗಳ ಮದ್ಯೆ ಟ್ರಂಚ್ ಗಳನ್ನು ತೆಗೆದು, ಈ ಟ್ರಂಚ್ ಗಳಲ್ಲಿ ಗೊಬ್ಬರ, ಹಸಿರೆಲೆ ಗಿಡಗಳು ಮತ್ತು ಕೃಷಿ ತ್ಯಾಜ್ಯ ವಸ್ತುಗಳನ್ನು ಮಲ್ಚಿಂಗ್ ಮಾಡುವುದು ( 1*2*205 = 410 ಘನ ಅಡಿ) | ರೂ.245.78 ಪ್ರತಿ ಘ.ಮೀ ಟ್ರಂಚ್ ಗೆ | 2. ಜೋಡಿ ಸಾಲು ((3'x2')+5' ಎಕರೆಗೆ 290.53 ಘ,ಮೀ. ಟ್ರಂಚ್ | | | | 350 | 204 | 71400 | 10 ಟನ್ ಭಯೋ ಮಾಸ್ | ಟನ್‌ಗೆ 800. | 8000 | – | – | – | – | – | – | ನರೇಗಾ 2 ಬಿ 2015–16 ಮತ್ತು ಇಲಾಖೆ |
| 11 | ಇಲಾಖೆ | ಒಂದು ಅಡಿ ಎತ್ತರಕ್ಕೆ ಗಿಡಗಳನ್ನು ಸಮನಾಗಿ ಕತ್ತರಿಸಿ ಬೇಡವಾದ ರೆಂಬೆಗಳನ್ನು ತೆಗೆಯುವುದು ( ವರ್ಷಕ್ಕೆ 5 ಬಾರಿ/ 5 ಮಾ.ದಿ. ಒಂದು ಬಾರಿ) | ಒಂದು ಮಾನವ ದಿನಕ್ಕೆ 800 ಚ.ಮಿ | 4000 ಚ.ಮೀ | | | | 25 | 204 | 5100 | | | | | | | | | | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |

ಸಂಖ್ಯೆ: EGS: 271
ದಿನಾಂಕ: 30/06/2015

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
|---|---|---|---|---|---|---|---|---|---|---|---|---|---|---|---|---|---|---|---|---|
| 12 | ಇಲಾಖೆ | ಸೊಪ್ಪು ಕಟಾವು ಮಾಡುವುದು (2ನೇ ವರ್ಷದಂದ 5 ಬೆಳೆಗೆ ) | ಒಂದು ಬೆಳೆಗೆ 15 ಮಾನವ ದಿನಗಳು | 75 ಮಾನವ ದಿನಗಳು | – | – | – | 75 | 204 | 15300 | | | | | | | | | | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |
| 13 | ಇಲಾಖೆ | ಜೈವಿಕ ಗೊಬ್ಬರ ಖರೀದಿ ( ವರ್ಷಕ್ಕೆ 2 ಬಾರಿ) | | | | | | | | | ಸೆರಿಪ್ರಕೃತಿ– 8ಕೆ.ಜಿ ಸೆರಿ ಫಾನ್–10 ವ್ಯಾಮ–01 | ರೂ. 57/ ಕೆ.ಜಿ. ರೂ.57/ ಕೆ.ಜಿ. ರೂ. 67/ ಕೆ.ಜಿ. | 2186 | | | | | | | ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ |
| 14 | ಇಲಾಖೆ | ಯಂತ್ರೋಪಸಾಧನಗಳ ವೆಚ್ಚ | | | | | | | | | ಒಟ್ಟಾರೆ | | 2000 | | | | | | | |
| | | ಒಟ್ಟು | | | 163000 | 119544 | 43456 | 586 | 204 | 119544 | – | – | 43456 | – | – | – | – | – | – | – |
| 15 | ನರೇಗಾ | ಸಲಕರಣೆಗಳ ಮೊನಚುಗೊಳಿಸುವಿಕೆ ವೆಚ್ಚ | ಪ್ರತಿ ದಿನಕ್ಕೆ ರೂ.10 | | | | 5860 | | | | | | | | | | | | | |
| | | ಒಟ್ಟು | | | 168860 | 119544 | 49316 | | | | | | | | | | | | | |
| 16 | ನರೇಗಾ | ತಾಂತ್ರಿಕ ಸಲಹಾ ಸೇವಾ ಅಂದಾಜು ವೆಚ್ಚ ಒಟ್ಟು ವೆಚ್ಚ | | | | | 1688 | | | | | | | | | | | | | |
| | | ಒಟ್ಟು | | | 170548 | 119544 | 51004 | | | | | | | | | | | | | |
| 17 | ನರೇಗಾ | ನಾಮಫಲಕ ಮತ್ತು ದಾಖಲೀಕರಣ ಅಳವಡಿಕೆಗಳು | | | | | 500 | | | | | | | | | | | | | |
| | | ಒಟ್ಟು | | | 171048 | 119544 | 51504 | | | | | | | | | | | | | |
| | ಕೂಲಿ:ಸಾಮಗ್ರಿ ಅನುಪಾತ | | | | | ಶೇ.69 | ಶೇ.31 | | | | | | | | | | | | | |

1. ಇಲಾಖಾ ಕಾರ್ಯಕ್ರಮದಲ್ಲಿ ಸದರಿ ಕಾಮಗಾರಿಗೆ ಪೂರ್ಣ ಪ್ರಮಾಣದ ಘಟಕ ವೆಚ್ಚವನ್ನು ನೀಡುವುದರಿಂದ ಒಗ್ಗೂಡಿಸುವಿಕೆ ಮಾಡಿಕೊಳ್ಳಲಾಗುತ್ತಿಲ್ಲ.
2. ಹಿಪ್ಪುನೇರಳೆ ತೋಟದ ಸಾಲುಗಳ ಮಧ್ಯೆ ಟ್ರಂಚ್‌ಗಳನ್ನು ತೆಗೆದು ಈ ಟ್ರಂಚ್‌ಗಳಲ್ಲಿ ಗೊಬ್ಬರ ಹಸಿರೆಲೆ ಗಿಡಗಳು ಮತ್ತು ಕೃಷಿ ತ್ಯಾಜ್ಯ ವಸ್ತುಗಳನ್ನು ಮಲ್ಚಿಂಗ್ ಮಾಡುವುದರಿಂದ ಮಣ್ಣಿನಲ್ಲಿ ಸಾವಯವ ಅಂಶ ಮತ್ತು ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ವೃದ್ಧಿಗೊಂಡು ಗುಣಮಟ್ಟದ ಹಿಪ್ಪುನೇರಳೆ ಸೊಪ್ಪು ಉತ್ಪಾದಿಸಬಹುದು.

295

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

# ಕರ್ನಾಟಕ ಸರ್ಕಾರ
## ರೇಷ್ಮೆ ಇಲಾಖೆ

**2015–16 ನರೇಗಾ ಕಾರ್ಯಕ್ರಮ**
**ಮಾದರಿ ಘಟಕ ದರ**

ಕಾಮಗಾರಿ 4 : ಹಿಪ್ಪುನೇರಳೆ ತೋಟದಲ್ಲಿ ಕಾಂಪೋಸ್ಟ್ ಗುಂಡಿ / ಇಂಗುಗುಂಡಿ ನಿರ್ಮಾಣ

(ಮೊತ್ತ ರೂ.ಗಳಲ್ಲಿ)

| ಕ್ರಸಂ | ಐಟಂ ಸಂ. | ಚಟುವಟಿಕೆ ವಿವರ | ದರ | ಪರಿಮಾಣ | ಒಟ್ಟು ಅಂದಾಜು ಮೊತ್ತ | | | ಎಂ.ಜಿ.ಎನ್.ಆರ್.ಇ.ಜಿ.ಎ | | | | | | ಇಲಾಖೆ ಒಗ್ಗೂಡಿಸುವಿಕೆ ಮೂಲಕ | | | | | | ಉಲ್ಲೇಖ |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | ಕೂಲಿ ವಿವರ | | | ಸಾಮಗ್ರಿ ವಿವರ | | | ಕೂಲಿ ವಿವರ | | | ಸಾಮಗ್ರಿ ವಿವರ | | | |
| | | | | | ಒಟ್ಟು ಮೊತ್ತ | ಕೂಲಿ | ಸಾಮಗ್ರಿ ವೆಚ್ಚ | ಮಾನವ ದಿನಗಳು | ಕೂಲಿ ದರ | ಮೊತ್ತ | ಪರಿಮಾಣ | ದರ | ಮೊತ್ತ | ಮಾನವ ದಿನಗಳು | ಕೂಲಿ ದರ | ಮೊತ್ತ | ಪರಿಮಾಣ | ದರ | ಮೊತ್ತ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
| 1 | 2ಬಿ ನರೇಗಾ | ಕಾಂಪೋಸ್ಟ್ ಗುಂಡಿ / ಹಿಂಗು ಗುಂಡಿ / ಇತರೆ ನಿರ್ಮಾಣ (ಅಗತ್ಯತೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಆಳತೆ ಇರತಕ್ಕದ್ದು) ಉದಾ: 5ಮೀ x 2ಮೀ x 1ಮೀ = 10 ಘ.ಮೀ. | ಪ್ರತಿ ಘ.ಮೀ.ಗೆ 245.78 | 10 ಘ.ಮೀ | | | – | 12 | 204 | 2448 | – | – | – | – | – | – | – | – | – | – |
| 2 | | ಯಂತ್ರೋಪಕರಣ ಸಾಧನಗಳ ವೆಚ್ಚ | | | | | | | | | | | 1200 | | | | | | | |
| | | ಒಟ್ಟು | | | 3648 | 2448 | 1200 | 12 | 204 | 2448 | | | 1200 | | | | | | | |
| 3 | | ಸಲಕರಣೆಗಳ ಮೊನಚುಗೊಳಿಸುವಿಕೆ ವೆಚ್ಚ | ಪ್ರತಿ ದಿನಕ್ಕೆ ರೂ. 10 | | | | 120 | | | | | | | | | | | | | |
| | | ಒಟ್ಟು | | | 3768 | 2448 | 1320 | | | | | | | | | | | | | |
| 4 | | ತಾಂತ್ರಿಕ ಸಲಹಾ ಸೇವಾ ಅಂದಾಜು ವೆಚ್ಚ ಶೇ 1 ರಷ್ಟು | | | | | 38 | | | | | | | | | | | | | |
| | | ಒಟ್ಟು | | | 3806 | 2448 | 1358 | | | | | | | | | | | | | |
| 5 | | ನಾಮಫಲಕ ಮತ್ತು ದಾಖಲೀಕರಣ | | | | | 100 | | | | | | | | | | | | | |
| | | ಒಟ್ಟು | | | 3906 | 2448 | 1458 | | | | | | | | | | | | | |
| | | ಕೂಲಿ: ಸಾಮಗ್ರಿ ಅನುಪಾತ | | | | ಶೇ.63 | ಶೇ 37 | | | | | | | | | | | | | |

ಕಾಂಪೋಸ್ಟ್ ಗುಂಡಿಯಲ್ಲಿ ಹುಳು ಸಾಕಾಣಿಕೆಯಲ್ಲಿ ಉತ್ಪಾದನೆಯಾಗುವ ಹಾಸಿಗೆ ತ್ಯಾಜ್ಯ, ಉಳಿದ ಹಣ್ಣಾದ ಮತ್ತು ಮಣ್ಣಾದ ಹಿಪ್ಪುನೇರಳೆ ಸೊಪ್ಪು ಹಾಗೂ ಇತರೆ ಹಸಿರೆಲೆ ಗಿಡಗಳ ಜೊತೆಗೆ ಸಗಣಿ ಮತ್ತು ನೀರನ್ನು ಹಾಕಿ ಮುಚ್ಚುವುದರಿಂದ ಐದಾರು ತಿಂಗಳ ನಂತರ ಕಾಂಪೋಸ್ಟ್ ಗೊಬ್ಬರವನ್ನು ಹಿಪ್ಪುನೇರಳೆ ತೋಟಕ್ಕೆ ಹಾಕುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚಾಗಿ ಉತ್ಕೃಷ್ಟ ಗುಣಮಟ್ಟದ ಹಿಪ್ಪುನೇರಳೆ ಸೊಪ್ಪನ್ನು ಉತ್ಪಾದಿಸಬಹುದು. ಈ ಸೊಪ್ಪಿನಿಂದ ಉತ್ತಮ ಗುಣಮಟ್ಟದ ಹೆಚ್ಚಿನ ಇಳುವರಿಯ ರೇಷ್ಮೆ ಗೂಡನ್ನು ಉತ್ಪಾದಿಸಿ ರೈತರು ಅವರ ಆರ್ಥಿಕ ಮಟ್ಟವನ್ನು ಉನ್ನತೀಕರಿಸಿಕೊಳ್ಳಬಹುದಾಗಿದೆ.

ಆಯುಕ್ತರ ಕಚೇರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ ಮತ್ತು ಪಂ. ರಾಜ್ ಇಲಾಖೆ
ಸಂಖ್ಯೆ: EGS-271
ದಿನಾಂಕ: 30/06/2015

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು